ವಿಜಯ ಕರ್ನಾಟಕ

# ಪ್ರಾಧ್ಯಾಪಕನ ಕರಾಟೆ ಕಿಕ್

## ಜೈನ್ ಕಾಲೇಜಿನ ಬಯೋಟೆಕ್ನಾಲಜಿ ಪ್ರಾಧ್ಯಾಪಕ ಮ್ಯಾಥ್ಯೂ ಕ್ರೀಡಾ ಪ್ರೀತಿ



ಬಹುತೇಕ ಪ್ರಾಧ್ಯಾಪಕರು ಸಮಯದ ಅಭಾವದ ಕುರಿತು ಹೇಳುತ್ತಾರೆ. ಆದರೆ ಮ್ಯಾಥ್ಯೂ ಪಾಠದ ಜತೆಗೆ ವಿದ್ಯಾರ್ಥಿಗಳಿಗೆ ಕರಾಟೆ ತರಬೇತಿಯನ್ನು ನೀಡುತ್ತಿದ್ದಾರೆ. ಕರಾಟೆ ಬಗೆಗಿನ ಅವರ ಪ್ರೀತಿ ಮತ್ತು ಬದ್ಧತೆ ಅವರನ್ನು ಎತ್ತರಕ್ಕೆ ಕೊಂಡೊಯ್ಯುತ್ತಿದೆ

- ಯು.ವಿ. ಶಂಕರ್
ಜೈನ್ ವಿವಿ ಕ್ರೀಡಾ ನಿರ್ದೇಶಕರು

**ಮಂಜುನಾಥ ಕೆ. ಜಾಬಗೆರೆ** ಬೆಂಗಳೂರು

ಬಹುತೇಕ ಶಾಲಾ-ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕರು, ಪ್ರಾಂಶುಪಾಲರು ಸೀಮಿತ ಹಾಗೂ ನಿರ್ದಿಷ್ಟ ಕೆಲಸಗಳಿಗೆ ಗಡಿ ಹಾಕಿಕೊಂಡಿರುತ್ತಾರೆ. ಆದರೆ ಇಲ್ಲೊಬ್ಬರು ಪ್ರೊಫೆಸರ್ ವಿದ್ಯಾರ್ಥಿಗಳಿಗೆ ಜೈವಿಕ ವಿಜ್ಞಾನ (ಬಯೋಟೆಕ್ನಾಲಜಿ) ಹೇಳಿಕೊಡುವ ಜತೆಗೆ ಕರಾಟೆ ತರಬೇತಿ ನೀಡುತ್ತಾ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾಗಿದ್ದಾರೆ.

ಇಂಥ ಮೆಚ್ಚುಗೆಗೆ ಪಾತ್ರರಾದವರು ಬೆಂಗಳೂರು ಜೆಸಿ ರಸ್ತೆಯಲ್ಲಿರುವ ಜೈನ್ ಕಾಲೇಜಿನ ಮ್ಯಾಥ್ಯೂ ಪಿ.ರಾಜ್. ಏಳು ವರ್ಷಗಳಿಂದ ಜೈನ್ ಕಾಲೇಜಿನಲ್ಲಿ ಜೈವಿಕ ವಿಜ್ಞಾನದ ಉಪನ್ಯಾಸಕರಾಗಿರುವ ಮ್ಯಾಥ್ಯೂ ಕಳೆದ ಎರಡು ವರ್ಷಗಳಿಂದ ಕರಾಟೆ ತರಬೇತುದಾರರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

1992ರಲ್ಲಿ ಕರಾಟೆ ಆರಂಭಿಸಿದ 29 ವರ್ಷದ ಮ್ಯಾಥ್ಯೂ, ವಿವಿಧ ವಯೋಮಿತಿಯಲ್ಲಿ ಸುಮಾರು 8ಕ್ಕೂ ಅಧಿಕ ರಾಷ್ಟ್ರೀಯ ಕರಾಟೆ ಚಾಂಪಿಯನ್ ಷಿಪ್‌ಗಳಲ್ಲಿ ಪಾಲ್ಗೊಂಡು ಚಿನ್ನ, ಬೆಳ್ಳಿ ಪದಕ ಜಯಿಸಿದ್ದಾರೆ.

**ಸ್ವರಕ್ಷಣೆಗಾಗಿ ಕರಾಟೆ ಅಭ್ಯಾಸ:** ಸ್ವರಕ್ಷಣೆಗಾಗಿ ಕರಾಟೆ ಅಭ್ಯಾಸದಲ್ಲಿ ತೊಡಗಿದ ಮ್ಯಾಥ್ಯೂ ಕ್ರಮೇಣ ಅದನ್ನೇ ವೃತ್ತಿಯಾಗಿಸಿಕೊಳ್ಳುವ ಗುರಿ ಹೊಂದಿದ್ದರು. ರಾಜ್ಯ, ಯುನಿವರ್ಸಿಟಿ ಮತ್ತು ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆದ್ದರು. ಆದರೆ ಕಾರಣಾಂತರಗಳಿಂದ ಕರಾಟೆಗೆ ಇತಿಶ್ರೀ ಹಾಡಿದ ಮ್ಯಾಥ್ಯೂ, ಎಂಎಸ್, ಎಂ.ಫಿಲ್ ಮುಗಿಸಿ ಪ್ರಸ್ತುತ ಜೈನ್ ಕಾಲೇಜಿನಲ್ಲಿ ಜೈವಿಕ ವಿಜ್ಞಾನದ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಕುರಿತು 'ವಿಜಯ ಕರ್ನಾಟಕ' ಜತೆ ಮಾತನಾಡಿದ ಮ್ಯಾಥ್ಯೂ, ''ಸ್ವರಕ್ಷಣೆಗಾಗಿ ಕರಾಟೆ ಆರಂಭಿಸಿದೆ. ಇದರಿಂದ ಮನಃಶಾಂತಿ, ಆರೋಗ್ಯ ಸುಧಾರಣೆ ಕಂಡು ಬಂದ ಹಿನ್ನೆಲೆಯಲ್ಲಿ ಕರಾಟೆಯನ್ನು ವೃತ್ತಿಯಾಗಿಸುವ ಗುರಿ ಹೊಂದಿದ್ದೆ. ಸೂಕ್ತ ಉತ್ತೇಜನ ಸಿಗದ ಕಾರಣ ಶೈಕ್ಷಣಿಕ ವೃತ್ತಿಗೆ ಮುಖ ಮಾಡಿದೆ. ಆದರೆ ನನ್ನಿಂದಾಗದ ಸಾಧನೆಯನ್ನು ನನ್ನ ವಿದ್ಯಾರ್ಥಿಗಳಿಂದ ಈಡೇರಿಸುವ ಹೆಬ್ಬಯಕೆ ಹೊಂದಿದ್ದೇನೆ,'' ಎಂದರು.

**ಎರಡು ವಿಭಾಗದಲ್ಲಿ ತರಬೇತಿ:** ಸ್ಪೋರ್ಟ್ಸ್ ಕರಾಟೆ ಮತ್ತು ಸಾಂಪ್ರದಾಯಿಕ ಕರಾಟೆ ಎಂಬ ಎರಡು ಹಂತಗಳಲ್ಲಿ 15 ವಿದ್ಯಾರ್ಥಿಗಳು ಸೇರಿದಂತೆ 45 ಮಂದಿಗೆ ಕಾಲೇಜಿನಲ್ಲಿ ತರಬೇತಿ ನೀಡುತ್ತಿದ್ದಾರೆ. ಸ್ಪೋರ್ಟ್ಸ್ ಕರಾಟೆಯಲ್ಲಿರುವ 15 ವಿದ್ಯಾರ್ಥಿಗಳಿಗೆ ಹೊಸ ಹೊಸ ತಂತ್ರಜ್ಞಾನ ಹಾಗೂ ಕೌಶಲ್ಯಗಳ ಬಗ್ಗೆ ತರಬೇತಿ ನೀಡಿದರೆ, ಸಾಂಪ್ರದಾಯಿಕ ತರಬೇತಿಯಲ್ಲಿ ಪಾಲ್ಗೊಳ್ಳುತ್ತಿರುವ ಮಹಿಳಾ ವಿದ್ಯಾರ್ಥಿಗಳು ಹಾಗೂ ಶಾಲಾ-ಕಾಲೇಜು ಶಿಕ್ಷಕರಿಗೆ ಸ್ವರಕ್ಷಣೆ ಕುರಿತು ಪ್ರತಿ ದಿನ ಸಂಜೆ ತರಬೇತಿ ನೀಡುತ್ತಿದ್ದಾರೆ. ಆರು ತಿಂಗಳ ಹಿಂದಷ್ಟೇ ಭಾರತೀಯ ಕರಾಟೆ ಸಂಸ್ಥೆಯಿಂದ ಕೋಚ್ ಪ್ರಮಾಣ ಪತ್ರ ಪಡೆದಿರುವ ಮ್ಯಾಥ್ಯೂ, ಈಗ ದೇಶದ ಯಾವುದೇ ಭಾಗದಲ್ಲಿ ಕರಾಟೆ ಕೋಚಿಂಗ್ ನೀಡುವ ಅರ್ಹತೆ ಗಳಿಸಿದ್ದಾರೆ. ಕಾಲೇಜಿನಲ್ಲಲ್ಲದೆ ಬೆಂಗಳೂರಿನ ವಕಾಯಾಮ ಕರಾಟೆ ಡು ಇಂಡಿಯಾ ಕ್ಲಬ್‌ನಲ್ಲಿ ಸುಮಾರು 201 ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ.

**ಪಾಠಕ್ಕೂ ಸೈ, ಕರಾಟೆಗೂ ಸೈ:** ಪ್ರವೃತ್ತಿಯಲ್ಲಿ ಕರಾಟೆ ಕೋಚ್ ಆಗಿರುವ ಮ್ಯಾಥ್ಯೂ ವೃತ್ತಿಯಾಗಿ ಸ್ವೀಕರಿಸಿರುವ ಪ್ರೊಫೆಸರ್ ಹುದ್ದೆಯಲ್ಲೂ ಯಶಸ್ಸಿನ ಹಾದಿಯಲ್ಲಿದ್ದಾರೆ. ''ಕಾಲೇಜು ಆಡಳಿತ ಮಂಡಳಿಯಿಂದ ಸಹಕಾರದಿಂದ ಎರಡು ಕಾರ್ಯಗಳಲ್ಲಿ ಮುಂದುವರಿಯಲು ಸಾಧ್ಯವಾಗುತ್ತಿದೆ. ತರಗತಿಯ ಬಿಡುವಿನ ವೇಳೆ ಕರಾಟೆ ತರಬೇತಿಗೆ ಅನುವು ಮಾಡಿಕೊಟ್ಟಿರುವ ಕಾರಣ ಯಾವುದೇ ತೊಂದರೆಯಾಗಿಲ್ಲ,'' ಎನ್ನುತ್ತಾರೆ. ಸ್ವರಕ್ಷಣೆ ಕುರಿತು ಬೆಂಗಳೂರಿನ ಹಲವೆಡೆ ಕಾರ್ಪೊರೇಟ್ ಶಿಬಿರಗಳನ್ನು ಆಯೋಜಿಸಿರುವ ಮ್ಯಾಥ್ಯೂ; ಟಿಸಿಎಸ್, ಇನ್ಫೋಸಿಸ್ ಸೇರಿದಂತೆ ಹಲವು ಸಂಸ್ಥೆಗಳಲ್ಲಿ ಮಹಿಳೆಯರು ಸ್ವರಕ್ಷಣೆ ಮಾಡಿಕೊಳ್ಳುವ ಬಗ್ಗೆ ಜಾಗೃತಿ ಅಭಿಯಾನಗಳನ್ನು ಕೈಗೊಂಡಿದ್ದಾರೆ.

**ಕರಾಟೆಗೆ ಜೈನ್ ವಿವಿ ಉತ್ತೇಜನ:** 2016ರ ಅಖಿಲ ಭಾರತ ಯುನಿವರ್ಸಿಟಿ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಕರಾಟೆಯನ್ನು ಸೇರ್ಪಡೆಗೊಳಿಸುವಲ್ಲಿ ಯಶಸ್ವಿಯಾಗಿರುವ ಜೈನ್ ವಿವಿ, ಕರಾಟೆ ಬೆಳವಣಿಗೆಗೆ ಇತರೆ ಕ್ರೀಡೆಗಳಂತೆಯೇ ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದೆ. ಇದರ ಫಲವಾಗಿಯೇ ಇತ್ತೀಚೆಗೆ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಜೈನ್ ವಿವಿ ತಂಡ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದ್ದು, ಇತರ ವಿವಿಗಳಿಗೆ ಮಾದರಿ ಎನಿಸಿದೆ.